*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಮೆಯೋಹಾಲ್ ಘಟಕ, ಬೆಂಗಳೂರು*

***(58ನೇ ನಗರ ಸಿವಿಲ್ ನ್ಯಾಯಾಂಗಣ)***

*ದಿನಾಂಕಃ 02ನೇ ಮಾಹೆ ಸಪ್ಟೆಂಬರ್, 2020*

*-ಃ ಉಪಸ್ಥಿತರು ಃ-*

*ಶ್ರೀ ಬಾಬಾಸಾಹೇಬ್ ಎಲ್. ಜಿನರಾಳ್ಕರ್, ಎಂ.ಎ., ಎಲ್‌ಎಲ್.ಎಂ.,*
*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,*
*ಮೆಯೋಹಾಲ್ ಘಟಕ, ಬೆಂಗಳೂರು*

*ಅಪರಾಧಿಕ ಸಂಕೀರ್ಣ ಅರ್ಜಿ ಸಂಖ್ಯೆ 25549/2020*

ಅರ್ಜಿದಾರಃ ಜಿ. ಲಕ್ಷ್ಮಣನ್ ಬಿನ್ಃ ಗಣಪತಿ,
ಸುಮಾರು 51 ವರ್ಷ,
ಮಾಲೀಕರುಃ Hydrocare Fluid Power Systems
ಕಛೇರಿ ವಿಳಾಸಃ ನಂ.171 ಮತ್ತು 172, ಕೆ.ಬಿ.ಎ.ಆರ್.ರಸ್ತೆ,
ಆಸ್ಟಿನ್ ಟೌನ್, ಬೆಂಗಳೂರು - 560047.

(ಪರವಾಗಿ ಶ್ರೀ ಮಹೇಶ, ವಕೀಲರು)

- ವಿರುದ್ಧ -

ಎದುರುದಾರರುಃ ರಾಜ್ಯದ ಪರವಾಗಿ ಅಶೋಕನಗರ ಪೊಲೀಸ್ ಠಾಣೆ,
ಬೆಂಗಳೂರು ನಗರ.

(ಪರವಾಗಿ ಸರ್ಕಾರಿ ಅಭಿಯೋಜಕರು)

*****

## ದಂಡ ಪ್ರಕ್ರಿಯಾ ಸಂಹಿತೆ ಕಲಂ 438ರಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲಿನ ಆದೇಶ

ಈ ಅಪರಾಧಿಕ ಸಂಕೀರ್ಣ ಅರ್ಜಿಯನ್ನು ಅರ್ಜಿದಾರ ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಸಲ್ಲಿಸಿ, ಭಾರತೀಯ ದಂಡ ಸಂಹಿತೆ ಕಲಂಃ 420

ರಡಿಯಲ್ಲಿ ದಾಖಲಾಗಬಹುದಾದ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ನೀಡಬೇಕೆಂದು ಕೋರಿ ಅರ್ಜಿ ಸಲ್ಲಿಸಿದ್ದಾನೆ.

2. ಅರ್ಜಿಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆ:-

ಅರ್ಜಿದಾರ ಅಮಾಯಕನಿದ್ದು, ತಾನು ಈ ಪ್ರಕರಣದಲ್ಲಿ ಆರೋಪಿಸಬಹುದಾದಂತಹ ಯಾವುದೇ ಕೃತ್ಯವನ್ನು ಎಸಗಿರುವುದಿಲ್ಲವೆಂದೂ, ತನ್ನನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಬಹುದೆಂದೂ, ಪಿರ್ಯಾದಿದಾರರು ತನ್ನ ವಿರುದ್ಧ ಸುಳ್ಳು ದೂರನ್ನು ನೀಡಬಹುದೆಂದೂ, ಆರೋಪಿಸಬಹುದಾದಂತಹ ಅಪರಾಧವು ಕಡ್ಡಾಯವಾಗಿ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸುವಂತಹ ಅಪರಾಧವಲ್ಲವೆಂದೂ, ಬೆಂಗಳೂರಿನ ಖಾಯಂ ನಿವಾಸಿಯಾಗಿರುವ ತಾನು ಕಾನೂನು ಪರಿಪಾಲನೆ ಮಾಡುವ ನಾಗರಿಕನಿದ್ದು, ತನಿಖೆಗೆ ಸಹಕರಿಸಲು ಹಾಗೂ ನ್ಯಾಯಾಲಯ ವಿಧಿಸುವ ಎಲ್ಲಾ ಷರತ್ತುಗಳನ್ನು ಪಾಲಿಸಲು ಮತ್ತು ಸೂಕ್ತ ಜಾಮೀನುದಾರರನ್ನು ನೀಡಲು ಸಿದ್ಧನಿದ್ದೇನೆಂದೂ, ತನಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡದೆ ಇದ್ದಲ್ಲಿ, ತುಂಬಲಾರದ ತೊಂದರೆ ಉಂಟಾಗುತ್ತದೆ ಎಂದು ಹೇಳಿ, ತನ್ನ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿದ್ದಾನೆ.

3. ಸರ್ಕಾರಿ ಅಭಿಯೋಜಕರು ಸಲ್ಲಿಸಿರುವ ತಕರಾರಿನಲ್ಲಿ, ಅರ್ಜಿದಾರನು ತನ್ನ ನಿರೀಕ್ಷಣಾ ಜಾಮೀನು ಅರ್ಜಿಯಲ್ಲಿ ಗುನ್ನೆ ದಾಖಲಾಗಬಹುದು ಎಂಬ ಕಾರಣದಿಂದ ತನಗೆ ನಿರೀಕ್ಷಣಾ ಜಾಮೀನನ್ನು ಮಂಜೂರು ಮಾಡಬೇಕೆಂದು ಕೋರಿ ಈ ಅರ್ಜಿಯನ್ನು ಸಲ್ಲಿಸಿದ್ದು, ಯಾವುದೇ ಗುನ್ನೆ ದಾಖಲಾಗದೇ ಇರುವುದರಿಂದ ಅರ್ಜಿದಾರ ಕೋರಿರುವಂತೆ ಆತನಿಗೆ ನೀರೀಕ್ಷಣಾ ಜಾಮೀನನ್ನು ಮಂಜೂರು

ಮಾಡಲು ಬರಲಾರದು. ಈ ಎಲ್ಲಾ ಕಾರಣಗಳಿಂದ ಅರ್ಜಿದಾರನ ಈ ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿಕೊಂಡಿದ್ದಾರೆ.

4. ಕಡತವನ್ನು ಪರಿಶೀಲಿಸಲಾಯಿತು ಹಾಗೂ ಉಭಯತರರ ವಾದ ವಿವಾದವನ್ನು ಆಲಿಸಲಾಯಿತು.

5. ಈ ಹಂತದಲ್ಲಿ ನನ್ನ ಪರಿಗಣನೆಗೆ ಉದ್ಭವಿಸುವ ಅಂಶಗಳೇನೆಂದರೇ:-

i) ಅರ್ಜಿದಾರ ಈ ಹಂತದಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 438ರಡಿಯಲ್ಲಿ ನಿರೀಕ್ಷಣಾ ಜಾಮೀನನ್ನು ಪಡೆಯಲು ಅರ್ಹನಿದ್ದಾನೆಯೇ?

ii) ಏನು ಆದೇಶ?

6. ಈ ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ:-

ಅಂಶ i): ಸಕಾರಾತ್ಮಕವಾಗಿ,
ಅಂಶ ii): ಅಂತಿಮ ಆದೇಶದಂತೆ, ಈ ಕೆಳಕಂಡಂತೆ:

## ಕಾ ರ ಣ ಗ ಳು:

7. ಅಂಶ i): ಅರ್ಜಿದಾರ, ತಾನು ಈ ಪ್ರಕರಣದಲ್ಲಿ ಆರೋಪಿಸಬಹುದಾದಂತಹ ಯಾವುದೇ ಕೃತ್ಯವನ್ನು ಎಸಗಿರುವುದಿಲ್ಲವೆಂದೂ, ತನ್ನನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಬಹುದೆಂದೂ, ತಾನು ಕಾನೂನು ಪರಿಪಾಲನೆ ಮಾಡುವ ನಾಗರಿಕನಿದ್ದು, ತನಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡದೆ ಇದ್ದಲ್ಲಿ ತುಂಬಲಾರದ ತೊಂದರೆಯಾಗುತ್ತದೆ ಎಂದು ಹೇಳಿ, ತನ್ನನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಡುಗಡೆಗೊಳಿಸಬೇಕೆಂದು ತನ್ನ ಅರ್ಜಿಯಲ್ಲಿ ಪ್ರತಿಪಾದಿಸಿದ್ದಾನೆ. ಅರ್ಜಿದಾರನ ಪರ ವಕೀಲರು, ಅರ್ಜಿದಾರನ ವಿರುದ್ಧ ಯಾವುದೇ ಅಪಾದನೆಗಳು ಕಂಡು

ಬರುತ್ತಿಲ್ಲವೆಂದೂ, ಆ ಕಾರಣ ಅರ್ಜಿದಾರನಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಬೇಕೆಂದು ವಾದಿಸಿದ್ದಾರೆ.

8. ಅರ್ಜಿದಾರನಿಗೆ ನಿರೀಕ್ಷಣಾ ಜಾಮೀನನ್ನು ಈ ಹಂತದಲ್ಲಿ ಕಾನೂನುಬದ್ಧವಾಗಿ ಮಂಜೂರು ಮಾಡಲು ಬರಲಾರದು. ಅರ್ಜಿದಾರ ತನ್ನ ಅರ್ಜಿಯಲ್ಲಿ ನಮೂದಿಸಿರುವಂತೆ ಭಾ.ದಂ.ಸಂ. ಕಲಂಃ 420ರಡಿಯಲ್ಲಿ ಯಾವುದಾದರೂ ಗುನ್ನೆ ದಾಖಲಾಗಿದ್ದರೆ ಆ ಬಗ್ಗೆ ತಮ್ಮ ವರದಿಯನ್ನು ಸಂಪೂರ್ಣ ಮಾಹಿತಿಯೊಂದಿಗೆ ಪೂರೈಸುವಂತೆ ಎದುರುದಾರ ಠಾಣೆಯನ್ನು ತಮ್ಮ ಕಛೇರಿಯಿಂದ ಕೋರಲಾಗಿ ಅವರು ಇಲ್ಲಿಯವರೆಗೂ ಯಾವುದೇ ಮಾಹಿತಿಯನ್ನು ತಮ್ಮ ಕಚೇರಿಗೆ ಪೂರೈಸಿಲ್ಲವೆಂದೂ, ಹೀಗಾಗಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲಿಂದ ಈ ತಕರಾರನ್ನು ತಯಾರಿಸಿ ಸಲ್ಲಿಸಲಾಗಿದ್ದು, ಅರ್ಜಿದಾರನ ವಿರುದ್ಧ ಯಾವುದೇ ಗುನ್ನೆ ದಾಖಲಾಗದೇ ಇರುವುದರಿಂದ ಅರ್ಜಿದಾರನು ಕೋರಿರುವಂತೆ ಆತನಿಗೆ ನೀರೀಕ್ಷಣಾ ಜಾಮೀನನ್ನು ಮಂಜೂರು ಮಾಡಲು ಬರಲಾರದು. ಹೀಗಾಗಿ ಆತನಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಬಾರದು ಎಂದು ಸರ್ಕಾರಿ ಅಭಿಯೋಜಕರು ವಾದಿಸಿದ್ದಾರೆ.

9. ಅರ್ಜಿದಾರನ ಪರ ವಕೀಲರು ಪ್ರಕರಣ ದಾಖಲಾಗದಿದ್ದರೂ ಸಹ ನಿರೀಕ್ಷಣಾ ಜಾಮೀನು ಮಂಜೂರು ಮಾಡಬಹುದು ಎಂದು ವಾದಿಸಿ ತಮ್ಮ ವಾದ ಸಮರ್ಥನೆಗಾಗಿ ಈ ಕೆಳಗಿನ ತೀರ್ಪನ್ನು ಉಲ್ಲೇಖಿಸಿದ್ದಾರೆ.

AIR 1980 Supreme Court 1632 (from: Punjab and Haryana) Gurbaksh Singh Sibbia etc., Vs. The State of Punjab and Sarbajit Singh and another Vs. The state of Punjab.

> The filing of a First Information Report is not a condition precedent to the exercise of the power u/s. 438 of Cr.P.C. The imminence of a likely arrest founded on a reasonable belief can be shown to exist even if an FIR is not yet filed.

10. ಆರೋಪಿಸಬಹುದಾದಂತಹ ಅಪರಾಧವು ಕಡ್ಡಾಯವಾಗಿ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸುವಂತಹ ಅಪರಾಧಗವಾಗಿರುವುದಿಲ್ಲ. ಅರ್ಜಿದಾರನ ವಿಳಾಸವನ್ನು ಗಮನಿಸಲಾಗಿ, ಆತ ಬೆಂಗಳೂರಿನ ಖಾಯಂ ನಿವಾಸಿ ಎಂದು ಕಂಡುಬರುತ್ತಿರುವುದರಿಂದ, ಆತನ ಹಾಜರಾತಿಯನ್ನು ಸೂಕ್ತ ಷರತ್ತುಗಳನ್ನು ವಿಧಿಸುವ ಮೂಲಕ ಪಡೆಯಬಹುದಾಗಿದೆ. ಸರ್ಕಾರಿ ಅಭಿಯೋಜಕರು ವ್ಯಕ್ತಪಡಿಸಿರುವ ಆತಂಕಗಳನ್ನು ಸೂಕ್ತ ಷರತ್ತುಗಳನ್ನು ವಿಧಿಸುವ ಮೂಲಕ ಅರ್ಜಿದಾರನಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಬಹುದಾಗಿದೆ ಎಂಬ ಅಭಿಪ್ರಾಯಕ್ಕೆ ಬಂದು ಮೇಲಿನ ಅಂಶ ಒಂದನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

11. <u>ಅಂಶ ii)</u>: ಅಂಶ ಒಂದರಲ್ಲಿ ನೀಡಿರುವ ಕಾರಣಗಳಿಂದ ಈ ಕೆಳಕಂಡ,

## <u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಅರ್ಜಿದಾರನಾದ ಜಿ.ಲಕ್ಷ್ಮಣನ್ ಈತನ ಪರವಾಗಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಅಶೋಕನಗರ ಪೊಲೀಸ್ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆ ಕಲಂ:420ರಡಿಯಲ್ಲಿ ದಾಖಲಾಗಬಹುದಾದಂತಹ ಪ್ರಕರಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಷರತ್ತುಗಳನ್ವಯ ಅರ್ಜಿದಾರನಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಲಾಗಿದೆ.

1. ಅರ್ಜಿದಾರನನ್ನು ಅಶೋಕನಗರ ಪೋಲೀಸ್ ಠಾಣೆಯವರು ಬಂಧಿಸಿದಲ್ಲಿ ಅರ್ಜಿದಾರ 50,000/- ರೂಪಾಯಿಗಳಿಗೆ ವೈಯಕ್ತಿಕ ಜಾಮೀನು ಮುಚ್ಚಳಿಕೆಯನ್ನು ಬರೆದುಕೊಡತಕ್ಕದ್ದು ಹಾಗೂ ಅಷ್ಟೇ ಮೊತ್ತಕ್ಕೆ ಒಬ್ಬ ಜಾಮೀನುದಾರರನ್ನು ನೀಡತಕ್ಕದ್ದು,
2. ಅರ್ಜಿದಾರ ಹಾಗೂ ಜಾಮೀನುದಾರರು ತಮ್ಮ ವಾಸದ ವಿಳಾಸದ ಬಗ್ಗೆ ಸೂಕ್ತ ದಾಖಲಾತಿಗಳನ್ನು ನೀಡತಕ್ಕದ್ದು,
3. ಅರ್ಜಿದಾರ ತನಿಖೆಗೆ ಸಹಕರಿಸತಕ್ಕದ್ದು,
4. ಅರ್ಜಿದಾರ ಭವಿಷ್ಯದಲ್ಲಿ ಈ ರೀತಿಯ ಯಾವುದೇ ಕೃತ್ಯಗಳನ್ನು ಎಸಗಬಾರದು.

*(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕ ಯಂತ್ರದ ಮೂಲಕ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ ನಂತರ ತಿದ್ದಿ ದಿನಾಂಕ 02ನೇ ಮಾಹೆ ಸೆಪ್ಟೆಂಬರ್, 2020ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದ್ದೇನೆ.)*

*(ಬಾಬಾಸಾಹೇಬ್ ಎಲ್. ಜಿನರಾಳ್ಕರ್),*
*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,*
*ಮೆಯೋಹಾಲ್ ಘಟಕ, ಬೆಂಗಳೂರು ನಗರ.*

**ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ (ಪ್ರತ್ಯೇಕ ಆದೇಶದಂತೆ) ಘೋಷಿಸಲಾಗಿದೆ.**

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಅರ್ಜಿದಾರನಾದ ಜಿ.ಲಕ್ಷ್ಮಣನ್ ಈತನ ಪರವಾಗಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಅಶೋಕನಗರ ಪೊಲೀಸ್ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆ ಕಲಂ:420ರಡಿಯಲ್ಲಿ ದಾಖಲಾಗಬಹುದಾದಂತಹ ಪ್ರಕರಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಷರತ್ತುಗಳನ್ವಯ ಅರ್ಜಿದಾರನಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಲಾಗಿದೆ.

1. ಅರ್ಜಿದಾರನನ್ನು ಅಶೋಕನಗರ ಪೋಲೀಸ್ ಠಾಣೆಯವರು ಬಂಧಿಸಿದಲ್ಲಿ ಅರ್ಜಿದಾರ 50,000/- ರೂಪಾಯಿಗಳಿಗೆ ವೈಯಕ್ತಿಕ ಜಾಮೀನು ಮುಚ್ಚಳಿಕೆಯನ್ನು ಬರೆದುಕೊಡತಕ್ಕದ್ದು ಹಾಗೂ ಅಷ್ಟೇ ಮೊತ್ತಕ್ಕೆ ಒಬ್ಬ ಜಾಮೀನುದಾರರನ್ನು ನೀಡತಕ್ಕದ್ದು,
2. ಅರ್ಜಿದಾರ ಹಾಗೂ ಜಾಮೀನುದಾರರು ತಮ್ಮ ವಾಸದ ವಿಳಾಸದ ಬಗ್ಗೆ ಸೂಕ್ತ ದಾಖಲಾತಿಗಳನ್ನು ನೀಡತಕ್ಕದ್ದು,
3. ಅರ್ಜಿದಾರ ತನಿಖೆಗೆ ಸಹಕರಿಸತಕ್ಕದ್ದು,
4. ಅರ್ಜಿದಾರ ಭವಿಷ್ಯದಲ್ಲಿ ಈ ರೀತಿಯ ಯಾವುದೇ ಕೃತ್ಯಗಳನ್ನು ಎಸಗಬಾರದು.

*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,*
*ಮೆಯೋಹಾಲ್ ಘಟಕ, ಬೆಂಗಳೂರು ನಗರ.*